**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 1048/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ** 04.10.2025 **ಸಿಡಬ್ಲ್ಯೂ** 02

| | |
|---|---|
| ಹೆಸರು | ಶೇಖರಪ್ಪ |
| ತಂದೆ ಹೆಸರು | ರೇವಣಸಿದ್ದಪ್ಪ |
| ವಯಸ್ಸು | 48 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಕುಣೆಬೆಳಕೆರೆ ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.2 ಮತ್ತು 3 ರವರ ಪರಿಚಯವಿದೆ. ಚಾಸಾ.8 ನನ್ನ ಮಗ. ದಿಃ 09.01.2024 ರಂದು ಬೆಳಿಗ್ಗೆ 11.30 ಗಂಟೆಗೆ ನಾನು ಮನೆಯಲ್ಲಿದ್ದಾಗ ನನ್ನ ಮಗ ಚಾಸಾ.8 ರವರಿಂದ ಅಪಘಾತದ ವಿಚಾರವಾಗಿ ಕರೆ ಬಂತು. ಸದರಿ ಅಪಘಾತ ನಂದಿತಾವರೆ ಹತ್ತಿರದ ಶಿವಮೊಗ್ಗ ರಸ್ತೆಯ ಭಾಸ್ಕರ್ ರಾವ್ ಕ್ಯಾಂಪ್ ಬಳಿ ನನ್ನ ಮಗನ ಬೈಕ್ ಮತ್ತು ಒಂದು ಕೆ ಎಸ್ ಆರ್ ಟಿ ಸಿ ಬಸ್ ನಡುವೆ ಅಪಘಾತ ಆಗಿತ್ತು. ಬಸ್ ಹಿಂದಿನಿಂದ ಬಲಗಡೆ ಅತಿವೇಗದಿಂದ ಬಂದು ಬೈಕನ್ನು ಓವರ್ ಟೇಕ್ ಮಾಡುವಾಗ ಅಪಘಾತ ಸಂಬವಿಸಿರುತ್ತದೆ. ಅಪಘಾತದಿಂದಾಗಿ ನನ್ನ ಮಗ ಕೆಳಗೆ ಬಿದ್ದಿದ್ದು ಅವನ ಬಲಗೈ ಮುರಿದಿರುತ್ತದೆ. ನನ್ನ ಮಗನ ಬೈಕ್ ಸ್ಪ್ಲೆಂಡರ್ ಪ್ಲಸ್ ಬೈಕ್. ಬಸ್ ಚಾಲಕ ಬಸ್ ನ್ನು ನಿಲ್ಲಿಸಿ ಚಾಸಾ.8 ರವರನ್ನು ಎಬ್ಬಿಸಿ ನೀರನ್ನು ಚುಂಬಿಸಿ ದೂರು ನೀಡಿ ಎಂದು ಹೇಳಿ ಹೋಗಿರುತ್ತಾರೆ. ಆಗ ನನ್ನ ಮಗ ತನ್ನ ಮೊಬೈಲ್ ನಿಂದ ಬಸ್ ನ ನಂಬರ್ ಪ್ಲೇಟನ ಫೊಟೋ ತೆಗೆದುಕೊಂಡಿರುತ್ತಾರೆ. ನನಗೆ ವಿಷಯ ತಿಳಿದ ನಂತರ ನಾನು ಸ್ಥಳಕ್ಕೆ ಹೋಗಿ ನನ್ನ ಮಗನನ್ನು ಮಲೆಬೆನ್ನೂರು ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದೇನೆ. ಅದೇ ದಿನ ಸಂಜೆ 4.30-5.00 ಗಂಟೆ ಸುಮಾರು ದೂರು ನೀಡಿರುತ್ತೇನೆ. ಸಾಕ್ಷಿಯು ಗುರುತಿಸಿದ ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 (ಎ) ಎಂದು ಗುರುತಿಸಲಾಯಿತು. ನಂತರ ನನ್ನ ಮಗನನ್ನು ದಾವಣಗೆರೆ ಸಿಜಿ ಆಸ್ಪತ್ರೆಗೆ ದಾಖಲಿಸಿ ಕೈ ಶಸ್ತ್ರಚಿಕಿತ್ಸೆ ಮಾಡಿಸಿರುತ್ತೇವೆ.

1 ವಾರದ ನಂತರ ಪೊಲೀಸರು ಕರೆ ಮಾಡಿ ಘಟನಾ ಸ್ಥಳಕ್ಕೆ ಬರಲು ತಿಳಿಸಿದರು. ಅದರಂತೆ ನಾನು ಸ್ಥಳಕ್ಕೆ ಹೋದೆನು. ಸದರಿ ಸಂದರ್ಭದಲ್ಲಿ ಸುಮಾರು ಮದ್ಯಾಹ್ನ 1.00 ಗಂಟೆ ಆಗಿತ್ತು. ಸದರಿ ಸಂದರ್ಭದಲ್ಲಿ ಛಾಯ ಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಗೆ ಒಂದು ತೋರಿಸಲಾಗಿ ಅದರಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು ಅದು ಸ್ಥಳ ಪಂಚನಾಮೆ ಆಗಿದ್ದು ಅದನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು

ನಿಪಿ.2 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಭಾಸ್ಕರ್ ರಾವ್ ಕ್ಯಾಂಪ್ ಹತ್ತಿರ ಅಪಘಾತದ ವಿಚಾರವಾಗಿ ಮಾಡಿರುತ್ತೇನೆ. ಸದರಿ ಸಂದರ್ಭದಲ್ಲಿ ನಾನು ಶಿವಕುಮಾರ್ ಮತ್ತು ಇನ್ನೊಬ್ಬ ಸಾಕ್ಷಿದಾರರು ಇದ್ದೆವು. ಸದರಿ ಕಾಲಕ್ಕೆ ಛಾಯ ಚಿತ್ರ ತೆಗೆದಿರುತ್ತಾರೆ. ಸಾಕ್ಷಿಯು ಗುರುತಿಸಿದ ಛಾಯ ಚಿತ್ರವನ್ನು ನಿಪಿ.3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ನಾನು ದೂರು ನೀಡಿದ ಮಾರನೇ ದಿನ ಅಂದರೆ ದಿಃ 10.01.2024 ರಂದು ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ಕಚ್ಚಾ ನಕಾಶೆ ಬಿಡಿಸಿ ಛಾಯ ಚಿತ್ರ ತೆಗೆದಿರುತ್ತಾರೆ ಎಂದರೆ ಸರಿ. ಸದರಿ ಎಲ್ಲಾವನ್ನು ಬೆಳಿಗ್ಗೆ 11.30 ರಿಂದ 12.30 ರವರೆಗೆ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಪಿ ವಕೀಲರಿಂದಃ**

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ.1 ನ್ನು ಪೊಲೀಸರು ಬೆರಳಚ್ಚು ಪಡಿಸಿ ಅದಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ನಿಪಿ.1 ನ್ನು ನನಗೆ ಪೊಲೀಸರು ಓದಿ ಹೇಳಿಲ್ಲ ಎಂದರೆ ಸರಿ. ನಿಪಿ.2 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. ಚಾಸಾ.2 ಮತ್ತು 3 ರವರು ನಿಪಿ.2 ಕ್ಕೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ.2 ನ್ನು ಬರೆಯಲು ನಾನು ಮಾಹಿತಿ ನೀಡಿಲ್ಲ ಎಂದರೆ ಸರಿ. ಭಾಸ್ಕರ್ ರಾವ್ ಕ್ಯಾಂಪ್ ಮತ್ತು ನಂದಿತಾವರೆ ಗ್ರಾಮಕ್ಕೆ 3-4 ಕಿ ಮೀ ಅಂತರವಿದೆ ಎಂದರೆ ಸರಿ. ನನ್ನ ಮಗನ ಮೋಟಾರ್ ಬೈಕ್ ನಂಬರ್ ನನಗೆ ನೆನಪಿಲ್ಲ. ನನ್ನ ಮಗನ ಚಾಲನಾ ಪರವಾನಿಗೆ ಮತ್ತು ಬೈಕನ ವಿಮೆ ದಾಖಲೆಗಳನ್ನು ನಾನು ಖುದ್ದಾಗಿ ನೋಡಿಲ್ಲ. ಬಸ್ ನಂಬರ್ ನನಗೆ ನೆನಪಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಅಪಘಾತವಾದ ದಿನ ನಾನು ಬಸ್ ಚಾಲಕನನ್ನು ನೋಡಿಲ್ಲ ಎಂದರೆ ಸರಿ. ಅಪಘಾತ ಸಂಬವಿಸಿದ ರಸ್ತೆ ಸಾಕಷ್ಟು ವಾಹನ ಸಂಚಾರ ಇರುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ 5-10 ನಿಮಿಷಕ್ಕೆ ಒಂದೊಂದು ಬಸ್ ಓಡಾಡುತ್ತವೆ ಎಂದರೆ ಸರಿ. ಅಪಘಾತಪಡಿಸಿ ಬಸ್ ಇದೇ ಬಸ್ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ. ಪರಿಹಾರಕ್ಕೋಸ್ಕರ ಪ್ರಸ್ತುತ ದೂರನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಅಪಘಾತ ಆರೋಪಿ ತಪ್ಪಿನಿಂದ ಆಗಿಲ್ಲ ನನ್ನ ಮಗ ಬೈಕ್ ಚಾಲನೆ ಮಾಡುವಾಗ ತಾನೇ ಬಿದ್ದು ಆಗಿರುವ ಅಪಘಾತ ಎಂದರೆ ಸರಿ. ನನ್ನ ಮಗ ಆಸ್ಪತ್ರೆಯಿಂದ ಬಿಡುಗಡೆ ಆಗಿ ಮನೆಯಲ್ಲಿ ಇದ್ದಾನೆ ಎಂದರೆ ಸರಿ. ಬಸ್ ಚಾಲಕ ಬಸ್ ನ್ನು ಅತಿವೇಗವಾಗಿ ಚಾಲನೆ ಮಾಡುತ್ತಿರಲಿಲ್ಲ ಎಂದರೆ ಸರಿ. ನಾವು ಪರಿಹಾರ ಧನ ಪಡೆಯುವ ಸಲುವಾಗಿ ದೂರು ಸಲ್ಲಿಸಿದ್ದೇವೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

C/c 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ